2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ **51/2023**

ಪಿ.ಡಬ್ಲುಃ **9** ಸಿಡಬ್ಲುಃ **21**

| | | |
|---|---|---|
| ಸಾಕ್ಷಿಯ ಹೆಸರು | : | ರಾಜಾಸಾಬ್ |
| ತಂದೆಯ ಹೆಸರು | : | ಶೇಖಣ್ಣ |
| ವಯಸ್ಸು | : | **21** ವರ್ಷ |
| ವೃತ್ತಿ | : | ಆಟೋ ಚಾಲಕ |
| ವಾಸಸ್ಥಳ | : | ಕಪ್ಪಗಲ್ಲು ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **03-07-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಈಗ ನೋಡುತ್ತಿರುವ ನೋಟಿಸ್ ಮತ್ತು ಶವ ತನಿಖಾ ವರದಿಯಲ್ಲಿ ಸಹಿಗಳು ಇವೆ. ನೋಟಿಸ್ ನ್ನು ನಿಪಿ-20 ಎಂದು ಹಾಗೂ ಶವ ತನಿಖಾ ವರದಿಯನ್ನು ನಿಪಿ-21 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-20(ಎ) ಮತ್ತು 21(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಿಗೆ ನಾನು ಸಹಿಗಳನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ಒಂದು ವರ್ಷದ ಹಿಂದೆ ಮಾಡಿದ್ದೆ. ಗಾಂಧಿ ನಗರ ಪೊಲೀಸ್ ಠಾಣೆಯ ಪೊಲೀಸರು ನನ್ನ ಸಹಿಗಳನ್ನು ಪಡೆದಿದ್ದರು. ಮೃತ ಜಾಫರ್ ಶರೀಫ್ ಈತನ ಶವ ಪಂಚನಾಮೆ ಮಾಡುವ ಸಮಯದಲ್ಲಿ ನನ್ನ ಸಹಿ ತೆಗೆದುಕೊಂಡಿದ್ದರು. ಆತನ ತಲೆಯ ಬಲಭಾಗದಲ್ಲಿ ಮತ್ತು ಕಿವಿಯಲ್ಲಿ ಗಾಯಗಳಾಗಿದ್ದವು. ಮಃ **11-00** ಗಂಟೆಯಿಂದ **12-00** ಗಂಟೆಯ ಒಳಗೆ ಮಹಜರ್ ನ್ನು ಮಾಡಿದ್ದರು. ನನ್ನ ಜೊತೆ ಆ ಸಮಯದಲ್ಲಿ ಚಾಸಾ-20 ರವರು ಸಹ ಹಾಜರಿದ್ದರು. ನಾನು ಈಗ ನೋಡುತ್ತಿರುವ 8 ಪೋಟೋಗಳನ್ನು ಸದರಿ ಶವ ಮಹಜರ್ ಸಮಯದಲ್ಲಿ ತೆಗೆದಿದ್ದರು. ಸದರಿ ಪೋಟೋಗಳನ್ನು ನಿಪಿ-22 ರಿಂದ 29 ಎಂದು ಗುರುತಿಸಲಾಯಿತು. ಮೃತನಿಗೆ ರಾಡ್‌ನಿಂದ ಹಲ್ಲೆ ಮಾಡಿದ್ದರಿಂದ ಗಾಯಳಾಗಿರುತ್ತವೆ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ಮೃತ ಜಾಫರ್ ಸಾಬ್ ಪಿಂಜಾರ್ ಜನಾಂಗಕ್ಕೆ ಸೇರಿದ್ದವನು ಎಂದರೆ ಸರಿ. ನಾನು ಸಹ ಪಿಂಜಾರ್ ಜನಾಂಗಕ್ಕೆ ಸೇರಿದ್ದೇನೆ ಎಂದರೆ ಸರಿ. ನಾನು ಕಪ್ಪಗಲ್ ನಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಪೊಲೀಸರು ಶವ ಪಂಚನಾಮೆಗೆ ಬರುವಂತೆ ಹೇಳಿ ಯಾವುದೇ ನೋಟಿಸ್ ನ್ನು ಕೊಟ್ಟಿಲ್ಲ. ನಿಪಿ-20 ಮತ್ತು 21 ರ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂಬುದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಸದರಿ ದಾಖಲೆಗಳನ್ನು ಯಾರು ಬರೆದಿದ್ದರು ಮತ್ತು ಎಲ್ಲಿ ಬರೆದಿದ್ದರು ಎಂದು ಅವುಗಳನ್ನು ಯಾರು ಟೈಪ್ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಮೃತನ ಮೇಲೆ ಇದ್ದ ಗಾಯಗಳ ಅಳತೆಗಳನ್ನು ನನ್ನ ಸಮಕ್ಷಮ ಮಾಡಿಲ್ಲ. ಪೊಲೀಸರು ಸಹಿ ಮಾಡು ಎಂದು ನನಗೆ ಹೇಳಿದ್ದರಿಂದ ನಾನು ನಿಪಿ-20 ಮತ್ತು 21 ರ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-22 ರಿಂದ 29 ರ ಫೋಟೋಗಳನ್ನು ಪೊಲೀಸರು ತೆಗೆದಿದ್ದರು, ಯಾವ ಪೊಲೀಸರು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಹೇಳಿಕೊಟ್ಟ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.